INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -3, September-October, 2021,
PageNo,83-91
Peer Reviewed Journal, Referred Journal

# ದೈವಿ ಶಿಲ್ಪಗಳು ಮತ್ತು ಮಾನವ ಮಾದರಿಗಳು ಪೂಜಾ ವಿಧಾನ: ಒಂದು ವಿಶ್ಲೇಷಣೆ

ಪ್ರಕಾಶ್.ಬಿ.ಸಿ.[1]
ಡಾ.ಎಂ.ವಿ.ರಮೇಶ್[2]

ಪ್ರಾಚೀನ ಕಾಲದಿಂದಲೂ ಮಾನವನು ದೇವರನ್ನು ಆರಾಧಿಸುತ್ತಾ ಬಂದಿದ್ದಾನೆ. ಪ್ರಕೃತಿ ಮನುಷ್ಯ, ಹುಟ್ಟು, ಸಾವು, ಮಳೆ, ಬೆಳೆ, ಹಗಲು, ರಾತ್ರಿ ಈ ಎಲ್ಲಾ ಚಟುವಟಿಕೆಗಳ ಹಿಂದೆ ದೇವರ ಕೈವಾಡವಿರುವುದನ್ನು ಜನಸಾಮಾನ್ಯರು ನಂಬಿದ್ದಾರೆ. ಆದ ಕಾರಣ ದೇವಿ (ದೇವರು) ಹಾಗೂ ಮನುಷ್ಯರ ನಡುವಿನ ಸಂಬಂಧವಿರುವುದನ್ನು ಕಾಣುತ್ತೇವೆ. ಕುಲದೇವತೆಗಳು, ಸ್ಥಳೀಯ ದೇವತೆಗಳು ಪ್ರಧಾನ ದೇವತೆಗಳಲ್ಲದೆ ದೆವ್ವ ಗಾಳಿಗಳನ್ನು ಬಲಿ ಕೊಡಲು ಯತ್ನಿಸುತ್ತಾರೆ. ದೇವರು ಮನುಷ್ಯರನ್ನು ನಿಯಂತ್ರಿಸುತ್ತಾರೆ ಎಂಬ ನಂಬಿಕೆ ಅಕಳಲ್ಲದೆ. ಈ ಸಮುದಾಯಕ್ಕೆ ಚಾನೋ ಪ್ರಧಾನ ದೇವರು. ಈತ ಮಾನವ ಮತ್ತು ಪ್ರಾಣಿಗಳನ್ನು ಆಳುತ್ತಾನೆ ಹಾಗೂ ಮಾನವನ ಏಳಿಗೆಗೆ ಪ್ರಾಣಿಗಳ ರಕ್ಷಣೆಗೆ ಕಾರಣವಾಗಿದ್ದಾನೆ ಎಂದು ನಂಬಿದ್ದಾರೆ.[1] ಶೈವ, ವೈಷ್ಣವ, ಜೈನ, ಬೌದ್ಧ, ಇನ್ನಿತರ ಪಂಥಗಳಿಗೆ ಪೂರಕವಾಗಿ ದೇವತೆಗಳನ್ನು ಆರಾಧಿಸುವುದು ತಿಳಿದುಬರುತ್ತದೆ. ಪ್ರಧಾನ ಮತಧರ್ಮಗಳಿಗೆ ಹೋಲಿಕೆ ಮಾಡಿದರೆ ಶರಣ, ಶಾಕ್ತ, ಆರೂಢ, ತಂತ್ರ, ನಾಥ, ಮಾಫಿ, ಕಾಪಾಲಿಕ ಮುಂತಾದ ಪಂಥಗಳ ಜೊತೆ ಇರಿಸಿಕೊಂಡಿರುವ ಸಂಬಂಧಕ್ಷೀಣ ಅಥವಾ ಪ್ರಾಸಂಗಿಕವೆನ್ನಬಹುದು ಇದಕ್ಕೆ ಕಾರಣಗಳನ್ನು ಊಹಿಸಬಹುದು.

ಕರ್ನಾಟಕದ ಮೊದಲ ಘಟ್ಟದ ದೊರೆಗಳಲ್ಲಿ ಒಬ್ಬರಾದ ಕದಂಬರು ಶಿವ ಮತ್ತು ವಿಷ್ಣುವಿನ ಆರಾಧಕರಾಗಿದ್ದರು. ಅವರ ಕುಲದೇವತೆ ಬನವಾಸಿಯ ಮಧುಕೇಶ್ವರವಾಗಿತ್ತು. ವೈಷ್ಣವರಿಗೆ ಹೋಲಿಸಿದರೆ ಶೈವಾರಾಧಕರಿಗೆ ಶಕ್ತಿದೇವತೆಗಳತ್ತ ಹೊರಳಿಕೊಳ್ಳುವುದು ಸುಲಭ. ಕದಂಬರು, ಗಂಗರು, ರಾಷ್ಟ್ರಕೂಟರು, ಬಾದಾಮಿ ಚಾಲುಕ್ಯ, ಕಲ್ಯಾಣ ಚಾಲುಕ್ಯ, ಹೊಯ್ಸಳರು, ವಿಜಯನಗರ ಅರಸರು,

---

**1. ಸಂಶೋಧಕರು**, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ,ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು.

2 .ಸಹಾಯಕ ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು.

ಮೈಸೂರು ಅರಸರು ಹಾಗೂ ಇನ್ನಿತರ ಅರಸು ಮನೆತನದವರು ಸಹ ದೇವಿ ದೇವರಲ್ಲಿ ಅಪಾರವಾದ ಭಕ್ತಿಯನ್ನು ಹೊಂದಿರುವುದು ಅವರ ಶಾಸನಗಳಿಂದ ಹಾಗೂ ಅವರು ಕಟ್ಟಿಬಿಟ್ಟು ಹೋಗಿರುವ ದೇವಾಲಯಗಳ ವಾಸ್ತುಶಿಲ್ಪಗಳಿಂದ ದೈವೀ ಮತ್ತು ಮಾನವ ಮಾದರಿಗಳ ಕುರಿತು ತಿಳಿದುಕೊಳ್ಳಲು ಸಾಧ್ಯವಾಗಿದೆ. ಪ್ರಾಚೀನ ಕಾಲದಿಂದಲೂ ಇದು ನಡೆದುಕೊಂಡು ಬಂದಿದೆ. ರಾಜರು ತಮ್ಮ ಪ್ರದೇಶದ ಇಲ್ಲವೇ ಕುಲದೇವತೆಯ ಲಬ್ಧವರ ಪ್ರಸಾದವೆಂದು ಕರೆದುಕೊಳ್ಳುತ್ತಾ ಹೋದುದನ್ನು ಕಾಣುತ್ತೇವೆ.

ರಾಜರುಗಳು ತಮ್ಮನ್ನು ವೇದಮತಾಚಾರ್ಯ ಪರಮ ಭಾಗವತ, ವೈದಿಕ ಮಾರ್ಗ ಪ್ರವರ್ತಕ, ಶೈವಾಗಮಸಾರ ಸಂಪನ್ನ, ಪ್ರತಿಷ್ಠಾಪಕ ಎಂದು ಹೆಮ್ಮೆಯಿಂದ ಸಾರಿಕೊಂಡ ದೊರೆಗಳಿರುವಷ್ಟು ಪ್ರಮಾಣದಲ್ಲಿ ಶಾಕ್ತಪರವೆಂದು ಘೋಷಿಸಿಕೊಂಡವರು ಕಾಣುವುದಿಲ್ಲ. ದೇವತೆಗೆ ಭಕ್ತಿ ತೋರುವುದು ಬೇರೆ ಹಾಗೂ ಒಂದು ಪಂಥಕ್ಕೆ ನಿಷ್ಠೆ ತೋರುವುದು ಬೇರೆ. ಆಡಳಿತ ಮಾಡುವ ದೊರೆಗಳಿಗೆ ಪರ್ಯಾಯವಾಗಿ ರಾಣಿಯರು ನಿರ್ದಿಷ್ಟ ದೈವ–ದೇವತೆ ಮತ್ತು ಮತಪಂಥಗಳನ್ನು ವೈಯಕ್ತಿಕ ವರ್ಚಸ್ಸು ಮತ್ತು ಪ್ರಭಾವದ ನೆಲೆಯಲ್ಲಿ ಪೋಷಿಸುತ್ತಿದ್ದರು. ಸ್ವತಃ ಶಕ್ತಿದೇವತೆಗಳ ಹೆಸರಿನ ಬಿರುದನ್ನು ಹೊಂದಿದ್ದರು. ಬಂಗಾಳದ ದುರ್ಗಾಪೂಜೆ, ಕೇರಳದ ಭಾಗವತಿ ಆರಾಧನೆ, ಮೈಸೂರಿನ ಚಾಮುಂಡೇಶ್ವರಿ, ತಮಿಳುನಾಡಿನ ಬಣ್ಣಾರಿ ದೇವಾಲಯಗಳು ದೈವೀ ಪ್ರಧಾನ ದೇವಾಲಯಗಳಾಗಿವೆ ಎಂದೇ ಹೇಳಬಹುದು.

ಅದೇ ಮಾದರಿಯಲ್ಲಿ ದೈವೀ ಮತ್ತು ಮಾನವ ಮಾದರಿಗಳು ಸಹ ಪುರಾತನ ಕಾಲದಿಂದಲೂ ನಡೆದು ಬಂದಿದೆ. ಮಾನವನು ಯುಗಯುಗಗಳಿಂದಲೂ ತನ್ನ ಇಷ್ಟಾರ್ಥಗಳ ಈಡೇರಿಕೆಗಾಗಿ ಆಯಾ ಭಗವಂತನಲ್ಲಿ ಜಪ, ತಪ, ಹೋಮ, ಹವನಗಳನ್ನು ನಡೆಸುವ ಕಾರ್ಯವನ್ನು ನಡೆಸುತ್ತಾ ಮೋಕ್ಷ ಸಾಧನೆಗೆ ಸುಗಮ ದಾರಿಯನ್ನು ಭಕ್ತ ಕಂಡುಕೊಳ್ಳುತ್ತಾನೆ. ಇಂತಹ ಯಾವುದೇ ವ್ರತ ಕಥೆ ನಿಯಮಗಳಲ್ಲಿ ಪ್ರಥಮವಾಗಿ ಎಲ್ಲಾ ಗಣಗಳಿಗೆ ಅಧಿಪತಿಯೂ ಗರುಡ, ಕಿನ್ನರ ಕಿಂಪುರಷರಿಂದ ಪೂಜಿಸಲ್ಪಡುವವನೂ ವಿದ್ಯೆಗೆ ಅಧಿಪತಿಯೂ ಆದ ಶ್ರೀವಿನಾಯಕನನ್ನು ಭಕ್ತ ಜನರು ತಾವು ಹಿಡಿದ ಕಾರ್ಯವು ನಿರ್ವಿಘ್ನವಾಗಿ ನಡೆದು ಯಶಸ್ಸುಂಟಾಗಲೆಂದು ಪೂಜಿಸುತ್ತಾರೆ.[2]

ಶೈವ ಪರಂಪರೆಯಲ್ಲಿ ಶಿವನ ಪ್ರಭಾವ ಅತ್ಯಂತ ಹೆಚ್ಚಿನದು. ಶಿವನನ್ನು ಪ್ರಾಚೀನ ಹಾಗೂ ಮಧ್ಯಯುಗೀನ ಗ್ರಂಥಗಳಲ್ಲಿ ವೈವಿಧ್ಯಮಯ ಕಲೆಗಳ ಜನರ ಹಾಗೂ ಸಾಧನೆ, ಸಿದ್ಧಿಗಳ ಹರಿಕಾರನೆಂದು ಕೂಡ ಬಣ್ಣಿಸಲಾಗಿದೆ. ಯೋಗ, ವ್ಯಾಖ್ಯಾನ ಶಾಸ್ತ್ರಗಳು ಮುಂತಾದವುಗಳು ಮೂಲಪುರುಷನೆಂದು ಬಣ್ಣಿಸಲಾಗಿದೆ. ಶಿವ ದಾನವಾಗಿ ಸಂಹಾರ ಹಾಗೂ ಪ್ರಳಯದ ದೇವರಾದ ಅವನ ಭಕ್ತರು ಆತನನ್ನು ಸೃಷ್ಟಿ ಹಾಗೂ ಸ್ಥಿತಿಯ ದೇವನೆಂದೂ ಬಣ್ಣಿಸಿದ್ದಾರೆ. ಅನುಗ್ರಹ ಹಾಗೂ ಪ್ರಸಾದದ ದೇವರೆಂದು ಶಿವನನ್ನು ಪೂಜಿಸಲಾಗುತ್ತದೆ. ಶಿವನನ್ನು ಉಮಾಪತಿ, ಪಶುಪತಿ ಹಾಗೂ

ಭೂತನಾಥನೆಂದು ತಿಳಿಸಲಾಗಿದೆ. ಇವನು ಮಹೇಶ್ವರ, ಮಹಾದೇವ, ಉಮಾಪತಿ ಹಾಗೂ ಮಾಲೆಯ ಯಜಮಾನನಾಗಿದ್ದಾನೆ. ಶಿವನಿಗೆ ಮಹಾಭಾರತದಲ್ಲಿ ಸಹ ನಾಮವಿದೆ. ಮಹಾಕಾವ್ಯ ಹಾಗೂ ಪುರಾಣ ಕಾಲದ ಶಿವ ವೇದಪೂರ್ವದಲ್ಲೂ ತನ್ನ ಮೂಲರೂಪ ಹೊಂದಿದ್ದಾನೆ. ವಾಜಸನೇಯ ಸಂಹಿತೆಯ ಭಗದಲ್ಲಿ ಶಿವನಿಗೆ 100 ಹೆಸರುಗಳಿವೆ. ಸಾಂಬ್ಯಾಯನ ಕೌಶೀತ್ತಕಿ ಮುಂತಾದ ಬ್ರಾಹ್ಮಣಗಳು ಶಿವ, ರುದ್ರ, ಮಹಾದೇವ, ಮಹೇಶ್ವರ, ಈಶ್ವರ, ಈಶ ಮುಂತಾದ ಹೆಸರನ್ನು ಬಳಸದೆ ಪುರಾಣ ಕಾಲದಲ್ಲಿ ಶಂಭು ಹಾಗೂ ಶಂಕರನೆಂಬ ಹೆಸರು ಬಂದವು. ವೇದಪೂರ್ವದ ಶಿವನ ಹೆಸರು ನಮಗೆ ತಿಳಿದಿಲ್ಲ.

**ಶಿವ**:– ಹಿಂದೂ ಧರ್ಮದಲ್ಲಿ ಪ್ರಕೃತಿಯೇ ದೇವರು ಎಂದು ಪೂಜಿಸಲಾಗುವುದು. ಪ್ರಕೃತಿಯಲ್ಲಿ ಇರುವ ಮೂಕ ಪ್ರಾಣಿ ಪಕ್ಷಿಗಳು ವಿಶೇಷವಾದ ಶಕ್ತಿಯನ್ನು ಹೊಂದಿರುತ್ತದೆ. ಅವುಗಳಲ್ಲೂ ದೈವ ಶಕ್ತಿಯಿದೆ ಎನ್ನುವ ನಂಬಿಕೆಯಿದೆ. ಈ ನಿಟ್ಟಿನಲ್ಲಿಯೇ ಸಾಕಷ್ಟು ಪ್ರಾಣಿ ಪಕ್ಷಿಗಳನ್ನು ಆರಾಧಿಸಲಾಗುವುದು. ಹಿಂದೂ ಧರ್ಮದ ದೇವತೆಗಳ ವಾಹನಗಳು ವಿಶೇಷ ಶಕ್ತಿಯನ್ನು ಹೊಂದಿದೆ. ಪ್ರಾಣಿ ಪಕ್ಷಿಗಳೇ ಎನ್ನುವುದನ್ನು ನಾವು ಕಾಣಬಹುದು. ತಮ್ಮ ವಾಹನಗಳಾದ ಪ್ರಾಣಿಗಳಿಂದಲೇ ಪ್ರಪಂಚವನ್ನು ಸುತ್ತುತ್ತಿದ್ದರು ಎನ್ನುವ ವಿಚಾರವನ್ನು ಇತಿಹಾಸದ ಪುರಾಣಗಳಲ್ಲಿ ಕಾಣಬಹುದು. ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನು ಸೃಷ್ಟಿಯ ಲಯ ಕರ್ತ, ಶಿವನ ಮಹಿಮೆ ಹಾಗೂ ಶಕ್ತಿಯು ಅದ್ಭುತವಾದದ್ದು, ಮಾನವ ಕುಲದ ಏಳಿಗೆ ಹಾಗೂ ಉದ್ಧಾರಕ್ಕೆ ಕಾರಣೀಕರ್ತನು ಎನ್ನಲಾಗುವುದು.

**ನಂದಿ**:– ಶಿವನು ತನ್ನ ವಾಹನವನ್ನಾಗಿ ಹಾಗೂ ಅತ್ಯಂತ ಪ್ರಿಯ ಪ್ರಾಣಿಯನ್ನಾಗಿ ನಂದಿಯನ್ನು ಹೊಂದಿದ್ದನು. ಹಾಗಾಗೀ ಶಿವನ ದೇವಸ್ಥಾನದ ನಿರ್ಮಾಣ ಮಾಡುವಾಗ ಶಿವನ ವಿಗ್ರಹಕ್ಕೆ ನೇರವಾಗಿ ನಂದಿಯ ವಿಗ್ರಹವನ್ನು ಇಡಲಾಗುವುದು. ನಂದಿ ಇಲ್ಲದ ಶಿವನ ದೇವಸ್ಥಾನ ಇರುವುದು ಅಪರೂಪ. ಶಿವನ ಮುಂದೆ ಕಾಲುಗಳನ್ನು ಮಡಚಿ ಕುಳಿತಿರುವ ನಂದಿಯು ವಿಶೇಷ ಶಕ್ತಿಯನ್ನು ಪಡೆದು ಕೊಂಡಿರುತ್ತದೆ ಎಂದು ಹೇಳಲಾಗುವುದು.[3] ಈ ನಂದಿಯು ಪ್ರಾಮಾಣಿಕತೆ ಹಾಗೂ ಸತ್ಯದ ಸಂಕೇತ ಎಂದು ಪರಿಗಣಿಸಲಾಗುವುದು. ಬುದ್ಧಿವಂತ ಪ್ರಾಣಿಯಾದ ನಂದಿ ಬಹಳ ಶ್ರಮದಾಯಕವಾದ ಪ್ರಾಣಿ. ಜನರು ತಮ್ಮ ಹೊಲ ಗದ್ದೆಯನ್ನು ಉಳಲು ಶಕ್ತಿವಂತ ನಂದಿ/ಬಸವನನ್ನೇ ಅವಲಂಬಿಸಿರುತ್ತಾರೆ. ಆಧುನಿಕತೆಯಲ್ಲಿ ಹಾಗೂ ತಂತ್ರಜ್ಞಾನದಲ್ಲಿ ಸಾಕಷ್ಟು ಸಾಧನೆಗೈದಿದ್ದಾರೂ ಬಹುತೇಕ ಮಂದಿ ತಮ್ಮ ಹೊಲವನ್ನು ಉಳಲು ಬಸವನನ್ನು ಬಳಸುತ್ತಾರೆ. ಶಾಂತಿ ಪ್ರೀತಿ ಹಾಗೂ ಸಹಾಯಕನಾದ ನಂದಿ/ಬಸವ ಕೋಪಗೊಂಡರೆ ಸಿಂಹನಂತೆ ಹೋರಾಡ ಬಲ್ಲ ಶಕ್ತಿಯನ್ನು ಹೊಂದಿದೆ. ನಂದಿಯ ಈ ವಿಶೇಷ ಗುಣಗಳನ್ನು ಅರಿತೇ ಶಿವನು ತನ್ನ ಕೈಲಾಸದಲ್ಲಿ ನಂದಿಯನ್ನು ವಾಹನವನ್ನಾಗಿ ಪಡೆದುಕೊಂಡಿದ್ದಾರೆ ಎನ್ನಲಾಗುವುದು. ಅದ್ಭುತ ದೈವಶಕ್ತಿಯನ್ನು ಹೊಂದಿರುವ ಶಿವ ಮತ್ತು ನಂದಿಯ ನಡುವೆ ಹೇಗೆ ಸ್ನೇಹ ಬೆಳೆಯಿತು, ನಂದಿಯ್ಯೇ ಶಿವನ ವಾಹನವಾಗಿ ಏಕೆ ಬಂದ ನಂದಿಯ ಹುಟ್ಟು ಹಾಗೂ ಕುತೂಹಲಕಾರಿ

ಸಂಗತಿಗಳ ಬಗೆಗೆ ನೀವು ತಿಳಿದುಕೊಳ್ಳಬೇಕು ಎಂದುಕೊಂಡಿದ್ದರೆ, ಬೋಳಸ್ಸೆ ಈ ಮುಂದೆ ವಿವರಿಸುವ ವಿವರಣೆಯನ್ನು ಪರಿಶೀಲಿಸಿ.

ನಂದಿ ಶಿವನ ಆಶೀರ್ವಾದ ಪಡೆದು ಜನಿಸಿದರು. ವಾಯುಪುರಾಣ ಕಥೆಯ ಪ್ರಕಾರ (ಅನುಸಾರ) ಋಷಿ ಕಶ್ಯಪರಿಗೆ ಮಕ್ಕಳಿರಲಿಲ್ಲ. ಕಶ್ಯಪ ಮುನಿಗಳು ಮತ್ತು ಅವರ ಮಡದಿ ಸುರಭಿಯು ಮಕ್ಕಳನ್ನು ಹೊಂದಬೇಕು ಎಂದು ಬಯಸುತ್ತಿದ್ದರು. ತಮಗೆ ಹುಟ್ಟಿದ ಮಗುವಿಗೆ ಕುಲದ ಹೆಸರನ್ನು ಇಡಬೇಕು ಎಂದು ಬಯಸಿದ್ದರು. ಪತಿ–ಪತ್ನಿ ಇಬ್ಬರು ಶಿವನ ಆರಾಧನೆ ಮಾಡಿದರು. ಭಕ್ತಿಯ ಆರಾಧನೆಗೆ ಮೆಚ್ಚಿದ ಶಿವನು ಕಶ್ಯಪ ದಂಪತಿಗಳಿಗೆ ಮಕ್ಕಳಾಗಲಿ ಎಂದು ಹರಸಿದನು. ನಂತರ ಗಂಡು ಮಗುವನ್ನು ಪಡೆದ ದಂಪತಿಗಳು ತುಂಬಾ ಸಂತೋಷಪಟ್ಟರು. ಮನೆಯಲ್ಲಿಯೂ ಹರ್ಷದ ಹೊನಲು ಹರಿಯಿತು. ನಂತರ ತಮ್ಮ ಮಗುವಿಗೆ ನಂದಿ ಎಂದು ನಾಮಕರಣ ಮಾಡಿದರು.

ವರುಣದೇವ ಮತ್ತು ನಂದಿ ಶಿಲಾದ್ ಋಷಿಯನ್ನು ಭೇಟಿ ಮಾಡಿದರು. ಕೆಲವು ಕಥೆ ಹಾಗೂ ಪುರಾಣದ ಅನುಸ್ಥಾರ ಶಿಲಾದ್ ಋಷಿಯ ಇಂದ್ರ ದೇವರಲ್ಲಿ ತನಗೆ ಬಲವಾದ ಹಾಗೂ ಶಕ್ತಿಯುತವಾದ ಮಗುವನ್ನು ಕರುಣಿಸು ಎಂದು ಕೇಳಿಕೊಂಡನು. ಇದಕ್ಕೆ ನೀನು ಶಿವನನ್ನು ಪ್ರಾರ್ಥಿಸಬೇಕು ಎಂದು ಇಂದ್ರದೇವನು ಸಲಹೆ ನೀಡಿದನು. ಅನಂತರ ಋಷಿ ಶಿವನ ಆರಾಧನೆ ಮಾಡಿ ಆಶೀರ್ವಾದ ಪಡೆದನು. ಇದಾದ ಬಳಿಕ ಶಿಲಾದ್ ಋಷಿ ಬಲಶಾಲಿಯಾಗಿರುವ ಮಗುವನ್ನು ಪಡೆದುಕೊಂಡನು. ಆ ಮಗುವನ್ನು ತನ್ನ ಮಗುವನ್ನಾಗಿ ದತ್ತು ಪಡೆದುಕೊಂಡನು. ಕೆಲವು ವರ್ಷಗಳ ಅನಂತರ ಇಂದ್ರ ದೇವ ಮತ್ತು ದೇವಮಿತ್ರನು ಪ್ರತ್ಯಕ್ಷರಾದರು. ಶಿಲಾದ್ ಮುನಿಗಳಿಗೆ ಸುದೀರ್ಘ ಜೀವನವನ್ನು ಹರಸಿದರು. ಆದರೆ ಮಗು ನಂದಿ ತನ್ನ 8ನೇ ವರ್ಷದಲ್ಲಿ ಸಾವನಪ್ಪುತ್ತಾನೆ ಎಂದು ಹೇಳಿದರು. ನಂದಿಯು ಶಿವನ ಪೂಜೆ ಮಾಡಿದನು. ನಂದಿಯು ತನ್ನ ಜೀವಿತದ ಅವಧಿಯನ್ನು ತಿಳಿದಾಗ ಅವನಿಗೆ 7 ವರ್ಷವಾಗಿತ್ತು. ವಿಷಯ ತಿಳಿದ ತಂದೆ ದುಃಖಿತನಾಗಿರುವುದು ನಂದಿಗೆ ನೋಡಲು ಸಾಧ್ಯವಾಗುತ್ತಿರಲಿಲ್ಲ. ಆಗ ನಂದಿಯು ಶಿವನನ್ನು ಮೆಚ್ಚಿಸಲು ತಪಸ್ಸನ್ನು ಗೈದನು. ತಪಸ್ಸನ್ನು ಮೆಚ್ಚಿ ಪ್ರತ್ಯಕ್ಷನಾದ ಶಿವನು ನಂದಿಗೆ ಗಂಟೆಯ ಹಾರವನ್ನು ನೀಡಿದನು. ಅನಂತರ ನಂದಿಯು ಅರ್ಧ ಮನುಷ್ಯನಾಗಿ ಹಾಗೂ ಅರ್ಧ ಗೂಳಿಯಾಗಿ ಇರುವಂತೆ ಆಶೀರ್ವಾದ ನೀಡಿದನು. ಇದಾದ ಬಳಿಕ ಶಿಲಾದ್ ಮುನಿ ಹಾಗೂ ನಂದಿ ಶಿವನ ಕೈಲಾಸ ಪರ್ವತಕ್ಕೆ ಹೋದರು. ಅಲ್ಲಿ ಅವನ ಗಣಗಳಲ್ಲಿ ಒಬ್ಬರಾಗಿ ಉಳಿದರು.

ನಂದಿ ದೇವತೆಯಾಗಿ ಪೂಜಿಸಲ್ಪಟ್ಟರೂ ಅದಾದ ಬಳಿಕ ಶಿವನ ಮೆಚ್ಚಿನ ವಾಹನ ಹಾಗೂ ಪ್ರಾಣಿಯಾಗಿ ನಂದಿ ಉಳಿದನು. ಶಿವನ ದೇವಸ್ಥಾನದಲ್ಲಿ ನಂದಿಯ ಮೂರ್ತಿಯನ್ನು ಇಡಲಾಯಿತು ಎನ್ನಲಾಗುತ್ತದೆ. ನಂದಿಗೂ ದೇವಾಲಾಯ್ದಲ್ಲಿ ದೈವರೂಪ ಎಂದು ಪೂಜಿಸಲಾಗುವುದು. ಕರ್ನೂಲ್ ಅಲ್ಲಿ

ಇರುವ ಮಹಾನಂದೀಶ್ವರ ದೇವಾಲಯದಲ್ಲಿ ನಂದಿ ದೇವರ ವಿಶೇಷ ವಿಗ್ರಹ ಇರುವುದನ್ನು ಕಾಣಬಹುದು. ಅಲ್ಲದೆ ಇದು ನಂದಿಯ ಅತ್ಯಂತ ದೊಡ್ಡ ಪ್ರತಿಮೆ ಎಂದು ಹೇಳಲಾಗಿದೆ.

ನಂದಿಯ ವಿಶೇಷತೆ ಎಂದರೆ; ನಂದಿ ನ್ಯಾಯ, ನಂಬಿಕೆ, ಗೌರವ, ಬುದ್ಧಿವಂತಿಕೆ ಮತ್ತು ಬಲಶಾಲಿಯ ಸಂಕೇತ ಎಂದು ಪರಿಗಣಿಸಲಾಗುವುದು. ಈ ಗುಣವನ್ನು ಹೊಂದಿರುವ ಎಲ್ಲಾ ವ್ಯಕ್ತಿಗಳು ಶಿವನಿಗೆ ಪ್ರಿಯವಾದ ವ್ಯಕ್ತಿಗಳಾಗಿರುತ್ತಾರೆ. ಶಿವನು ತಾಂಡವ ನೃತ್ಯ ಮಾಡುವಾಗ ನಂದಿಯು ಸಂಗೀತವನ್ನು ನುಡಿಸುತ್ತಾನೆ ಎಂದು ಹೇಳಲಾಗುವುದು. ಭಗವಾನ್ ಶಿವನ ಸೈನ್ಯದ ಅಧಿಪತಿಯಾಗಿದ್ದನು. ನಂದಿಯು ಧರ್ಮದ ರಕ್ಷಕ ಹಾಗೂ ವರಗಳನ್ನು ನೀಡುವವನು ಎಂದು ಹೇಳಲಾಗುವುದು.

**ಭೃಂಗಿ**:–ಶಿವಭಕ್ತನಿಗೆ ಶಾಪವಿತ್ತಳು ಪಾರ್ವತಿ ಹಠದಿಂದ ದೇಹವನ್ನೇ ಕಳೆದುಕೊಂಡ ಭೃಂಗಿ. ಭೃಂಗಿ ಮಹಾನ್ ಶಿವಭಕ್ತ, ಶಿವಗಣಗಳಲ್ಲಿ ಒಬ್ಬನಾದ ಭೃಂಗಿಗೆ ಪಾರ್ವತಿದೇವಿ ಯೇಕೆ ಶಾಪವನ್ನು ನೀಡಿದಳು. ಭೃಂಗಿ ೩ ಕಾಲುಗಳನ್ನು ಪಡೆಯಲು ಕಾರಣವೇನು ಇಲ್ಲದೆ ಭೃಂಗಿ ಮತ್ತು ಶಿವಪಾರ್ವತಿಯ ನಡುವಿನ ಕಾದಾಟ. ಮಹಾದೇವ ಅವರ ಗಣಗಳಲ್ಲಿ ಭೃಂಗಿಯ ಬಗೆಗೆ ನೀವು ಈಗಾಗಲೇ ಕಥೆಯಲ್ಲಿ ಓದಿರಬಹುದು ಅಥವಾ ಕೇಳಿರಬಹುದು. ಏಕೆಂದರೆ; ಬೋಲೆನಾಥನ ಗಣಗಳಲ್ಲಿ ಭೃಂಗಿಗೆ ವಿಶೇಷ ಸ್ಥಾನವನ್ನು ನೀಡಲಾಗಿದೆ. ಆದರೆ ಮಹಿಳೆಯರ ವಿಷಯ ತೆಗೆದುಕೊಂಡಾಗ ಆತನ ಮನ್ನಣೆ ಕಡಿಮೆಯಾಗುತ್ತದೆ. ಯಾರಿರಬಹುದು ಹೌಸು ಶಿವನ ಸರ್ವೋಚ್ಚಭಕ್ತ ಭೃಂಗಿ ತನ್ನ ತಾಯಿ ಪಾರ್ವತಿ ಮತ್ತು ಬೋಲೆನಾಥನನ್ನು ಪ್ರತ್ಯೇಕವಾಗಿ ಅರ್ಥಮಾಡಿಕೊಂಡಾಗ ಅವನು ಶಾಪಕ್ಕೆ ಗುರಿಯಾಗಬೇಕಾಯಿತು. ಅಲ್ಲದೆ ಮಹಿಳೆಯರ ಪ್ರಾಮುಖ್ಯತೆಯನ್ನು ಮನವರಿಕೆ ಮಾಡಲು ಬೋಲೆನಾಥನು ಹೊಸಲೀಲೆಯನ್ನೇ ಸೃಷ್ಟಿಸಿದನು. ಮಹಾದೇವನ ಗುಣಗಳಲ್ಲಿ ಭಂಗಿಗೆ ವಿಶೇಷ ಸ್ಥಾನವಿದೆ. ಶಿವನು ಎಲ್ಲಿ ಇರುತ್ತಾನೋ ಅಲ್ಲಿ ಗಣೇಶ, ನಂದಿ, ಶೃಂಗಿ, ಭೃಂಗಿ ವೀರಭದ್ರರು ಸ್ವತಃ ವಾಸಿಸುತ್ತಾರೆ ಎಂದು ಹೇಳಲಾಗುತ್ತದೆ. ಅವರ ಗುಣ ಯಾವಾಗಲೂ ಬೋಲೆನಾಥ ಮತ್ತು ಮಾತಾ ಪಾರ್ವತಿಯೊಂದಿಗೆ ಇರುತ್ತದೆ. ಭೃಂಗಿಯ ವಿಶೇಷವೆಂದರೆ; ಶಿವವಿವಾಹದ ಮದುವೆ ಮೆರವಣಿಗೆಯವನು ಮೂರು ಕಾಲುಗಳನ್ನು ಹೊಂದಿದ್ದನು.

ಭೃಂಗಿ ಒಬ್ಬ ಮಹಾನ್ ಶಿವಭಕ್ತ ಬೋಲೆನಾಥನ ಮೇಲೆ ಆತನಿಗಿದ್ದ ಪ್ರೀತಿ ವಿಶಿಷ್ಟವಾಗಿತ್ತು. ಅ ವ್ವನು ತನ್ನ ಕನಸಿನಲ್ಲಿಯೂ ಶಿವನನ್ನು ಹೊರತುಪಡಿಸಿ ಬೇರೆಯವರ ಬಗೆಗೆ ಚಿಂತೆಯೇ ಮಾಡುತ್ತಿರಲಿಲ್ಲ ಎಂದು ಹೇಳಲಾಗುತ್ತದೆ. ಪಾರ್ವತಿ ದೇವಿಯನ್ನು ಸಹ ಶಿವನಿಂದ ಪ್ರತ್ಯೇಕವೆಂದು ಅವನು ಪರಿಗಣಿಸಿದ್ದನು. ಅವನ ಮನಸ್ಸಿನಲ್ಲಿ ಯಾವಾಗಲೂ ಶಿವಸ್ಯ ಚರಣಂ ಕೇವಲಂ ಎಂಬ ಭಾವನೆ ಇತ್ತು. ಶಿವ ಮತ್ತು ಪಾರ್ವತಿಯ ನಡುವೆ ಯಾವುದೇ ವ್ಯತ್ಯಾಸವಿಲ್ಲ ಎಂದುಅ ವರ ಬುದ್ಧಿಶಕ್ತಿ ಕೂಡ

ಒಪ್ಪಲಿಲ್ಲ. ಈ ಕಾರಣದಿಂದಾಗಿ ಒಮ್ಮೆ ಭಂಗಿ ಶಿವನ ಮತ್ತು ಪಾರ್ವತಿಯನ್ನು ಪೂಜಿಸುವಾಗ ಅವರ ನಡುವೆ ಭೇದಭಾವ ಮಾಡುತ್ತಿರುವುದನ್ನು ಶಿವನು ಅರಿತುಕೊಳ್ಳುತ್ತಾನೆ. ಭಂಗಿಯ ಮನಸ್ಸಿನಲ್ಲಿರುವ ಪ್ರತ್ಯೇಕತೆಯನ್ನು ಹೋಗ್ಲಾಡಿಸ್ದಬೆಕೆಂದು ಶಿವನು ಅರ್ಧನಾರೀಶ್ವರ ರೂಪವನ್ನು ತೆಗೆದುಕೊಳ್ಳಬೇಕಾಯಿತು. ಶಿವನಿಗೆ ಪ್ರದಕ್ಷಿಣೆ ಹಾಕಲು ಭೃಂಗಿ ಹೀಗೆ ಮಾಡಿದ್ದ. ಭೃಂಗಿಯು ಬೋಲೇನಾಥನಿಗೆ ಪರಿಶ್ರಮ ಮಾಡಲೆಂದು ಕೈಲಾಸವನ್ನು ಪ್ರವೇಶಿಸುತ್ತಾನೆ. ಅಂದಿನಂತೆ ಅಲ್ಲಿ ಆದಿಶಕ್ತಿಯು ಮಹಾದೇವನ ಎಡಭಾಗದ ತೊಡೆಯ ಮೇಲೆ ಕುಳಿತಿದ್ದಳು. ಶಿವನು ತಪಸ್ಸಿನ ಸ್ಥಿತಿಯಲ್ಲಿದ್ದನು ಮತ್ತು ಪಾರ್ವತಿ ಚೈತನ್ಯ ಭರಿತಳಾಗಿದ್ದಳು ಹಾಗೂ ಅವಳು ತನ್ನ ಕಣ್ಣುಗಳನ್ನು ತೆರೆದು ಕುಳಿತಿದ್ದಳು. ಭೃಂಗಿಯು ಶಿವಭಕ್ತಿಯ ಪ್ರಕಾರ ಶಿವ ಮತ್ತು ಪಾರ್ವತಿದೇವಿ ಪ್ರತ್ಯೇಕವಾಗಿದ್ದರಿಂದ ಅವನು ಶಿವನಿಗೆ ಪ್ರದಕ್ಷಿಣೆ ಹಾಕುವಾಗ ಪಾರ್ವತಿ ದೇವಿಯು ಶಿವನ ತೊಡೆಯ ಮೇಲೆ ಕುಳಿತಿರುವುದು ಇಷ್ಟವಾಗುವುದಿಲ್ಲ. ತಾನು ಕೇವಲ ಶಿವನಿಗೆ ಮಾತ್ರ ಪ್ರದಕ್ಷಿಣೆಯನ್ನು ಹಾಕಬೇಕೆಂದು ಅವನು ಬಯಸುತ್ತಾನೆ. ಆದ್ದರಿಂದ ಅವನು ಪಾರ್ವತಿ ದೇವಿಯ ಬಳಿ ಶಿವನ ತೊಡೆಯಿಂದ ಇಳಿದು ದೂರ ಕುಳಿತುಕೊಳ್ಳುವಂತೆ ಹೇಳುತ್ತಾನೆ.[4]

ಪಾರ್ವತಿಯ ಮಾತನ್ನು ಕೇಳದ ಭೃಂಗಿ, ಆಗ ಪಾರ್ವತಿ ದೇವಿಯು ತಪಸ್ವಿ ಭೃಂಗಿಗೆ ಸ್ಥಿತಿಯನ್ನು ಅರ್ಥ ಮಾಡಿಸಲು ಮುಂದಾದಳು. ಆದರೆ ಅವನು ಮಹಿಳೆಯ ಮಾತನ್ನು ನಿರ್ಲಕ್ಷಿಸಿದನು ಮತ್ತು ಪದೇ ಪದೇ ಆಕೆಯನ್ನು ಶಿವನಿಂದ ದೂರ ಕುಳಿತುಕೊಳ್ಳುವಂತೆ ಆಜ್ಞೆ ಮಾಡುತ್ತಿದ್ದನು. ಆಗ ಮಹಾತಾಯಿ ಪಾರ್ವತಿ ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಅನುಚಿತ ವಿಷಯವನ್ನು ನಿಲ್ಲಿಸಿ ಎಂದು ಹೇಳಿದರು. ಮೊದಲಿಗೆ ಅವಳು ಗಣಗಳನ್ನು ಅನೇಕ ವಿಧಗಳಲ್ಲಿ ವಿವರಿಸಿದಳು. ಪ್ರಕೃತಿ ಮತ್ತು ಮನುಷ್ಯನ ನಡುವಿನ ಸಂಬಂಧವನ್ನು ವಿವರಿಸಿದಳು. ವೇದಗಳ ಉದಾಹರಣೆಯನ್ನು ನೀಡಿದಳು, ಆದರೆ ಇದಾವುದನ್ನು ಭೃಂಗಿ ಅರ್ಥಮಾಡಿಕೊಳ್ಳುವುದಿಲ್ಲ. ತಾಯಿಯ ಈ ವಿಷಯವನ್ನು ಭೃಂಗಿ ನಿರ್ಲಕ್ಷಿಸಿದಾಗ; ಭೃಂಗಿ ಹಾವಿನ ರೂಪವನ್ನು ಪಡೆದುಕೊಂಡು ಶಿವನಿಗೆ ಪ್ರದಕ್ಷಿಣೆಯನ್ನು ಹಾಕಿದನು. ಪಾರ್ವತಿ ದೇವಿಯು ಶಿವನಿಂದ ಹೊರಬರಲು ಮುಂದಾದಳು. ಅವನ ಹಠವು ಶಿವನ ತಪಸ್ಸನ್ನು ನಾಶಮಾಡಲು ಕಾರಣವಾಯಿತು. ನನ್ನ ಎಡತೊಡೆಯ ಮೇಲೆ ಕುಳಿತಿದ್ದ ಪಾರ್ವತಿಯನ್ನು ನೋಡಿ ಭೃಂಗಿಯು ಅಸಮಾಧಾನ ಹೊಂದಿದ್ದಾನೆ ಎಂದು ಶಿವನು ಅರ್ಥಮಾಡಿಕೊಂಡನು. ಅವನು ನಮ್ಮಿಬ್ಬರ ನಡುವೆ ವ್ಯತ್ಯಾಸವನ್ನು ಮಾಡುತ್ತಿದ್ದಾನೆ ಎಂದು ತಿಳಿದುಕೊಂಡನು. ಇದನ್ನು ಸಾಂಕೇತಿಕ ರೀತಿಯಲ್ಲಿ ವಿವರಿಸಲು ಶಿವನು ತಕ್ಷಣವೇ ಅರ್ಧನಾರೀಶ್ವರ ರೂಪದಲ್ಲಿ ಪಾರ್ವತಿದೇವಿಯು ಶಿವನೊಂದಿಗೆ ಲೀನಗೊಂಡಳು.

ದಂತಕಥೆಯ ಪ್ರಕಾರ; ಶಿವನು ಬಲದಿಂದ ಪುರುಷ ರೂಪದಲ್ಲಿ ಮತ್ತು ಸ್ತ್ರೀ ರೂಪದಲ್ಲಿ ಎಡಭಾಗದಿಂದ ಕಾಣಿಸಿಕೊಂಡನು. ಇದರಿಂದ ಮತ್ತೆ ಭೃಂಗಿಯು ಪಾರ್ವತಿಯ ಮೇಲೆ

ಕೋಪಗೊಂಡನು. ಅನಂತರ ಭೃಂಗಿ ಇಲಿಯ ರೂಪವನ್ನು ಪಡೆದುಕೊಂಡು ಶಿವ ಪಾರ್ವತಿಯನ್ನು ಬೇರ್ಪಡಿಸಲು ಮುಂದಾಗುತ್ತಾನೆ. ಆಗ ಪಾರ್ವತಿ ದೇವಿಯು ಭೃಂಗಿಗೆ ಶಾಪವನ್ನು ನೀಡಿದಳು. ಓ ಭೃಂಗಿ ನೀವುಟ್ಟ ಬ್ರಹ್ಮಾಂಡದ ಮೂಲನಿಯಮಗಳನ್ನು ಉಲ್ಲಂಘಿಸುತ್ತಿದ್ದೀರಿ, ತಾಯ್ಯಿಯ ಶಕ್ತಿಯನ್ನು ಗೌರವಿಸುವ ನಿಮ್ಮ ಶಕ್ತಿಯು ನಾಶವಾಗಲಿ ಮತ್ತು ನಿಮ್ಮ ಶರೀರದಲ್ಲಿನ ನಿಮ್ಮ ತಾಯಿಯ ಅಂಶ ಬೇರ್ಪಡಲಿ ಎಂದು ಶಾಪವನ್ನು ನೀಡುತ್ತಾಳೆ. ಈ ಶಾಪವನ್ನು ಮಹಾದೇವ ಸ್ವತಃ ಅಸಮಾಧಾನಗೊಂಡನು. ಶರೀರ ಶಾಸ್ತ್ರದ ಯಾಂತ್ರಿಕ ವಿವರಣೆಯ ಪ್ರಕಾರ; ಮಾನವ ದೇಹದಲ್ಲಿನ ಮೂಳೆಗಳು ಮತ್ತು ಸ್ನಾಯುಗಳು ತಂದೆಯನ್ನು ಅವಲಂಬಿಸಿರುತ್ತದೆ. ಆದರೆ ರಕ್ತ ಮತ್ತು ಮಾಂಸವನ್ನು ತಾಯಿಯ ದೇಹದಿಂದ ಪಡೆಯಲಾಗುತ್ತದೆ. ಪಾರ್ವತಿ ದೇವಿಯ ಶಾಪದಿಂದ ಭೃಂಗಿಯು ಸಾವನ್ನಪ್ಪುತ್ತಾನೆ. ತಕ್ಷಣವೇ ರಕ್ತ ಮತ್ತು ಮಾಂಸವನ್ನು ಅವರ ದೇಹದಿಂದ ಬೇರ್ಪಡಿಸಲಾಗುತ್ತದೆ. ದೇಹದಲ್ಲಿ ಮೂಳೆಗಳು ಮತ್ತು ಸ್ನಾಯುಗಳು ಮಾತ್ರ ಉಳಿಯುತ್ತವೆ. ಅವನು ಕೈಲಾಸದಲ್ಲಿದ್ದ ಕಾರಣ ಇವನ ಪ್ರಾಣ ಹೋಗುವುದಿಲ್ಲ ಮತ್ತು ಅಲ್ಲಿಗೆ ಯಮಧೂತರು ಬರುವುದಿಲಲ್ಲೆಂದು ಶಿವನಿಗೆ ತಿಳಿದಿತ್ತು. ಭೃಂಗಿಯ ಮನಸ್ಸಿನಲ್ಲಿ ಸೃಷ್ಠಿಯ ಬಗೆಗೆ ಇದ್ದ ತಾರತಮ್ಯವನ್ನು ತೆಗೆದುಹಾಕಲು ಪಾರ್ವತಿದೇವಿಯು ಈ ನಿರ್ಧಾರವನ್ನು ತೆಗೆದುಕೊಂಡಿದ್ದಳೆಂದು ಶಿವನು ಸುಮ್ಮನಾಗುತ್ತಾನೆ. ಶಾಪದಿಂದಾಗಿ ಯಾವುದೇ ಸಂದರ್ಭದಲ್ಲಿ ಪಿತೃತ್ವವು ತಾಯಿಯ ಈ ಶಕ್ತಿಯನ್ನು ಮೀರಿಲ್ಲ ಎಂದು ಭೃಂಗಿಯು ಅರ್ಥೈಸಿಕೊಳ್ಳುತ್ತಾನೆ. ತಾಯಿ ಮತ್ತು ತಂದೆ ಒಟ್ಟಾಗಿ ಈ ದೇಹವನ್ನು ಸೃಷ್ಟಿಸುತ್ತಾರೆ. ಆದ್ದರಿಂದ ಎರಡೂ ಪೂಜ್ಯ. ಇದರ ಅನಂತರ ಭೃಂಗಿ ಅಸಹನೀಯ ನೋವಿನಿಂದ ಬಳಲುತ್ತಿದ್ದ ತಾಯಿಯನ್ನು ಪೂಜಿಸಿದರು. ಭೃಂಗಿಯು ತಕ್ಷಣ ತನ್ನ ತಪ್ಪಿಗೆ ಕ್ಷಮೆಯನ್ನು ಯಾಚಿಸಿ ಆಕೆಯನ್ನು ಸಂತೈಸುತ್ತಾನೆ ಮತ್ತು ಪಾರ್ವತಿ ದೇವಿಯು ಕೂಡ ಆತನ ಸಂಕಟವನ್ನು ಕೊನೆಗೊಳಿಸಿದಳು. ತಾಯಿ ಪಾರ್ವತಿಯ ತನ್ನ ಶಾಪವನ್ನು ಹಿಂತೆಗೆದುಕೊಳ್ಳುವ ಕಾರ್ಯವನ್ನು ಪ್ರಾರಂಭಿಸಿದಳು. ಆದರೆ ಧರ್ಮನಿಷ್ಠೆ ಭೃಂಗಿಯು ಶಾಪವನ್ನು ಹಿಂತೆಗೆದುಕೊಳ್ಳದಂತೆ ತಾಯಿಯನ್ನು ತಡೆದರು.

ಭೃಂಗಿ ಈ ಕಾರಣದಿಂದ ಮೂರು ಕಾಲನ್ನು ಪಡೆದನು. ಪಾರ್ವತಿ ಶಾಪವನ್ನು ಏಕೆ ಹಿಂತೆಗೆದುಕೊಳ್ಳಬಾರದು ಎಂದು ಭೃಂಗಿಯನ್ನು ಕೇಳಿದಾಗ; ಅವನು ಈ ರೂಪದಲ್ಲಿರಲ್ಲಿ ನನ್ನ ಈ ರೂಪವು ಜಗತ್ತಿಗೆ ಒಂದು ಉದಾಹರಣೆಯಾಗಿದೆ. ಈ ಸೃಷ್ಟಿಯಲ್ಲಿ ಮತ್ತೆ ನನ್ನಂತೆ ಯಾರೂ ಗೊಂದಲಕ್ಕೆ ಬಲಿಯಾಗುವುದಿಲ್ಲ. ತಾಯಿ ಮತ್ತು ತಂದೆಯನ್ನು ಪರಸ್ಪರ ಅರ್ಥ ಮಾಡಿಕೊಳ್ಳಲು ಮುಂದಾಗುತ್ತಾರೆ. ನಾನು ತುಂಬಾ ಅಪರಾಧ ಮಾಡಿದ್ದೇನೆ. ಆದರೂ ನಿಮಗೆ ನನ್ನ ಮೇಲೆ ಅನುಗ್ರಹವಿದೆ. ಈಗ ನಾನು ಯಾವಾಗಲೂ ನಿಮ್ಮ ಸುತ್ತಲೂ ಜೀವಂತ ಉದಾಹರಣೆಯಾಗಿರುತ್ತೇನೆ.

ಮಹಾದೇವ ಮತ್ತು ಮಾತಾ ಪಾರ್ವತಿ ಭಕ್ತನ ಈ ಮಾತನ್ನು ಕೇಳಿ ಸಂತೋಷಪಟ್ಟರು. ಮಾತೆ ಪಾರ್ವತಿ ಮತ್ತು ಶಿವನು ಅರ್ಧ ನಂದೀಶ್ವರ ರೂಪವನ್ನು ಧರಿಸಿ ತಕ್ಷಣ ಭೃಂಗಿಗೆ ತಮ್ಮ ಗಣಗಳಲ್ಲಿ ಪ್ರಮುಖ ಸ್ಥಾನವನ್ನು ನೀಡಿದರು. ಭೃಂಗಿಗೆ ಮೂರನೇ ಕಾಲನ್ನು ನೀಡಿ ಆತನು ನಡೆಯುವಂತೆ ಮಾಡಿದರು. ಮೂರನೇ ಕಾಲಿನಿಂದ ಅವನು ತನ್ನ ಭಾರವನ್ನು ಹೊತ್ತುಕೊಂಡು ಶಿವಪಾರ್ವತಿಯೊಂದಿಗೆ ನಡೆಯುತ್ತಾನೆ.

**ಬೇಡರ ಕಣ್ಣಪ್ಪ:–** ಈತನ ಮೂಲ ಹೆಸರು ಕಣ್ಣಪ್ಪ. ಶಿವನ ಕಟ್ಟಾ ಭಕ್ತಾನಿಗಿದ್ದು, ಶ್ರೀಕಾಳಹಸ್ತೀಶ್ವರ ದೇವಸ್ಥಾನಕ್ಕೆ ನಿಕಟ ಸಂಬಂಧ ಹೊಂದಿದ್ದಾನೆ. ಅವನು ಮೂಲತಃ ಬೇಟೆಗಾರನಾಗಿದ್ದನು ಮತ್ತು ಶ್ರೀಕಾಳಹಸ್ತಿ ದೇವ ದೇವಸ್ಥಾನದ ಪ್ರಧಾನ ದೇವತೆಯಾದ ಶ್ರೀಕಾಳಹಸ್ತೀಶ್ವರ ಲಿಂಗವನ್ನು ಅರ್ಪಿಸಲು ಅವನ ಕಣ್ಣುಗಳನ್ನು ತೆಗೆದನೆಂದು ನಂಬಲಾಗಿದೆ. ಆತನನ್ನು 63 ನಾಯಿನಾರ್ ಅಥವಾ ಪವಿತ್ರ ಶೈವ ಸಂತರಲ್ಲಿ ಒಬ್ಬನೆಂದು ಪರಿಗಣಿಸಲಾಗಿದೆ. ಶಿವನ ಕಟ್ಟಾಭಕ್ತರು ಐತಿಹಾಸಿಕ ವೃತ್ತಾಂತಗಳ ಪ್ರಕಾರ ಅವನು ತನ್ನ ಹಿಂದಿನ ಜೀವನದಲ್ಲಿ ಪಾಂಡವರ ಅರ್ಜುನನಾಗಿದ್ದನು.

ಅರ್ಜುನನು ಪಾಶುಪತಾಸ್ತ್ರಕ್ಕಾಗಿ ಶಿವನನ್ನು ಧ್ಯಾನಿಸುತ್ತಿದ್ದಾಗ ಅವನನ್ನು ಪರಿವೀಕ್ಷಿಸಲು ಶಿವನು ಆ ಕಾಡನ್ನು ಪ್ರಾಣಿ ಬೇಟೆಗಾರನಾಗಿ ಪ್ರವೇಶಿಸಿದನು ಮತ್ತು ಶಿವ ಮತ್ತು ಅರ್ಜುನನಿಂದ ಮೂಕ ಎಂಬ ರಾಕ್ಷಸನನ್ನು ಕೊಂದ ಎಂದು ಬಾಣಗಳಿಂದಾಗಿ ಶಿವ ಮತ್ತು ಅರ್ಜುನನ ನಡುವೆ ಯುದ್ಧವಾಯಿತು. ಎರಡು ಮತ್ತು ಅಂತಿಮವಾಗಿ ಅರ್ಜುನನ ಪ್ರಯತ್ನಗಳಿಂದ ಪ್ರಭಾವಿತನಾದ ಶಿವನು ಅವನಿಗೆ ಪಾಶುಪತಾಸ್ತ್ರವನ್ನು ನೀಡಿದನು. ಆದಾಗ್ಯೂ ಶ್ರೇಷ್ಠ ಯೋಧನೆಂಬ ಹೆಗ್ಗಳಿಕೆಯ ಸ್ವಭಾವದಿಂದಾಗಿ ಅವರು ಕಲಿಯುಗದಲ್ಲಿ ಕಣ್ಣಪ್ಪನಾಯರ್ ಆಗಿ ಮತ್ತೆ ಭಕ್ತನಾಗಿ ಜನಿಸಿದನು ಮತ್ತು ಅಂತಿಮವಾಗಿ ವಿಮೋಚನೆ ಪಡೆದರು. ಶ್ರೀಕಾಳಹಸ್ತೀಶ್ವರ ದೇವಸ್ಥಾನದ ವಾಯುಲಿಂಗದ ಕಟ್ಟಾ ಭಕ್ತನಾಗಿದ್ದನು. ಅವನು ಬೇಟೆಯಾಡುವಾಗ ಕಾಡಿನಲ್ಲಿ ಕಂಡುಕೊಂಡನು. ಬೇಟೆಗಾರನಾಗಿದ್ದ ಅವನಿಗೆ ಶಿವನನ್ನು ಹೇಗೆ ಸರಿಯಾಗಿ ಪೂಜಿಸಬೇಕು ಎಂದು ತಿಳಿದಿರಲಿಲ್ಲ. ಅವರು ಸಮೀಪದ ನದಿಯ ಸ್ವರ್ಣ ಮುಖಿಯಿಂದ ತಂದ ಶಿವಲಿಂಗದ ಮೇಲೆ ಬಾಯಿಯಿಂದ ನೀರ್ನನುಸುರಿದರು ಎಂದು ಹೇಳಲಾಗಿದೆ. ಅವರು ಹಂದಿಮಾಂಸವನ್ನು ಒಳಗೊಂಡಂತೆ ಯಾವುದೇ ಪ್ರಾಣಿಗಳನ್ನು ಬೇಟೆಯಾಡಿದರೂ ಸಹ ಅವರು ಶಿವನಿಗೆ ಅರ್ಪಿಸಿದರು. ಆದರೆ ಶಿವನು ತನ್ನ ಕೊಡುಗೆಗಳನ್ನು ಸ್ವೀಕರಿಸಿದನು. ಏಕೆಂದರೆ ತಿನ್ನನು ಹೃದಯದಲ್ಲಿ ಶುದ್ಧವಾಗಿದ್ದನ್ನು ಮತ್ತು ಅವನ ಭಕ್ತಿ ಸತ್ಯವಾಗಿತ್ತು. ಒಮ್ಮೆ ಶಿವನು ತೈನ್ನನ ಅಚಲ ಭಕ್ತಿಯನ್ನು ಪರೀಕ್ಷಿಸಿದನು. ತನ್ನ ದೈವಿಕ ಶಕ್ತಿಯಿಂದ ಆತ ನಡುಕವ್ವನ್ನು ಸೃಷ್ಟಿಸಿದರು ಮತ್ತು ದೇವಾಲಯದ ಮೇಲ್ಛಾವಣಿಗಳು ಬೀಳಲು ಪ್ರಾರಂಭಿಸಿದವು. ಲಿಂಗವನ್ನು ಯಾವುದೇ ಯಾನಿಯಾಗದಂತೆ ತನ್ನ ದೇಹದಿಂದ ಮುಚ್ಚಿದ ತಿನ್ನನನ್ನು ಹೊರತುಪಡಿಸಿ ಎಲ್ಲಾ ಅರ್ಚಕರು ಸ್ಥಳದಿಂದ ಓಡಿಹೋದರು. ಆದ್ದರಿಂದ ಆತನಿಗೆ ನಂತರ ಧೀರ ಎಂದು ಹೆಸರಿಸಲಾಯಿತು. ಶಿವಲಿಂಗದ

ಒಂದು ಕಣ್ಣು ರಕ್ತ ಮತ್ತು ಕಣ್ಣೀರನ್ನು ಹರಿಯುತ್ತಿರುವುದನ್ನು ತಿನ್ನ ಗಮನಿಸಿದ, ಶಿವನ ಕಣ್ಣಿಗೆ ಗಾಯವಾಗಿರುವುದನ್ನು ಗ್ರಹಿಸಿದ ತಿನ್ನನು ತನ್ನ ಒಂದು ಬಾಣದಿಂದ ತನ್ನ ಒಂದು ಕಣ್ಣನ್ನು ಹೊರತೆಗೆದು ಶಿವಲಿಂಗದ ರಕ್ತಸ್ರಾವದ ಕಣ್ಣಿನ ಸ್ಥಳದಲ್ಲಿ ಇರಿಸಿದನು. ಇದು ಲಿಂಗದ ಕಣ್ಣಿನಲ್ಲಿ ರಕ್ತಸ್ರಾವವನ್ನು ನಿಲ್ಲಿಸಿತು. ಆದರೆ ವಿಷಯಗಳನ್ನು ಮತ್ತಷ್ಟು ಜಟಿಲಗೊಳಿಸುವುದ್ದಕಾಗಿ ಲಿಂಗದ ಇನ್ನೊಂದು ಕಣ್ಣು ಕೂಡ ರಕ್ತವನ್ನು ಹರಿಸಲು ಆರಂಭಿಸಿರುವುದನ್ನು ಅವನು ಗಮನ ಹರಿಸಿದನು. ಹಾಗಾಗಿ ತನ್ನ ಇನ್ನೊಂದು ಕಣ್ಣನ್ನು ಕೂಡ ಕಿತ್ತುಕೊಂಡರೆ ಲಿಂಗದ ಎರಡನೇ ಕಣ್ಣಿನ ಮೇಲೆ ತನ್ನ ಎರಡನೇ ಕಣ್ಣನ್ನು ಇಡಬೇಕಾದ ಸ್ಥಳವನ್ನು ನಿಖರವಾಗಿ ತಿಳಿಯಲು ಅವನು ಕುರುಡನಾಗುತ್ತಾನೆ ಎಂದು ದಿನ್ನಾ ಭಾವಿಸಿದನು. ಆದುದರಿಂದ ಅವರು ತನ್ನ ಬೆರಳಿನ ಬೆರಳನ್ನು ಲಿಂಗದ ಮೇಲೆ ಇಟ್ಟನು ಮತ್ತು ಎರಡನೇ ಕಣ್ಣಿನ ರಕ್ತವನ್ನು ಗುರುತಿಸಿದನು ಮತ್ತು ಅದರ ಇನ್ನೊಂದು ಮತ್ತು ಒಂದನೇ ಕಣ್ಣನ್ನು ತೆಗೆಯಲು ಮುಂದಾದನು. ಆತನ ತೀವ್ರ ಭಕ್ತಿಯಿಂದ ಪ್ರೇರೇಪಿತನಾದ ಶಿವನು ತಿನ್ನನ ಮುಂದೆ ಪ್ರತ್ಯಕ್ಷನಾದನು.ಅವರ ಏಕೈಕ ಕಣ್ಣನ್ನು ತೆಗೆಯುವುದನ್ನು ನಿಲ್ಲಿಸಿದನು ಮತ್ತು ಅವನ ಎರಡೂ ಕಣ್ಣುಗಳನ್ನು ಪುನಃಸ್ಥಾಪಿಸಿದನು. ಅವರು 63 ನಾಯರ್‌ಗಳಲ್ಲಿ 10ನೇ ಸ್ಥಾನವನ್ನು ಪಡೆದರು ಮತ್ತು ಅವರನ್ನು ಕಣ್ಣಪ್ಪನ್ ಅಥವಾ ಕಣ್ಣಪ್ಪ ನಾಯನಾರ್ ಎಂದು ಕರೆಯಲಾಯಿತು. ಕಣ್ಣಪ್ಪನು ಶಿವನೊಂದಿಗೆ ಲಿಂಗದಲ್ಲಿ ವಿಲೀನಗ್ಗೊಂಡನು ಮತ್ತು ಅವನ ಹಿಂದಿನ ಜೀವನದಲ್ಲಿ ಅರ್ಜುನನಾಗಿದ್ದ ಕಣ್ಣಪ್ಪ ಕೊನೆಗೆ ಮೋಕ್ಷವನ್ನು ಪಡೆದನು. ಈತನೇ ಬೇಡರ ಕಣ್ಣಪ್ಪ.[5] ಹೀಗೆ, ಶಿಲ್ಪಗಳುಳ್ಳ ದೇವರ ಪ್ರತಿರೂಪವಾಗಿ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಅದೇ ರೀತಿ ಕೊಡಗು ಜಿಲ್ಲೆಯಲ್ಲಿ ಶಕ್ತಿದೇವತೆಯ ಆರಾಧನೆಗಳು ಜಾನಪದದ ಹಿನ್ನೆಲೆಯಲ್ಲಿ ಜರುಗುತ್ತಿವೆ.

**ಕೊನೆಟಿಪ್ಪಣಿಗಳು**


1. ಡಾ.ಕೆ.ಎನ್.ಗಂಗಾನಾಯಕ್, ಭಾರತೀಯ ಜಾನಪದ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿವಿ, ಮಾನಸಗಂಗೋತ್ರಿ, ಮೈಸೂರು, 2001, ಪು.ಸಂ.6.
2. ಬಿ.ಎಸ್.ಪಾರಿಜಾತ ಮೋಹನ – ನಾಡಗುಡಿಗಳು, ಕ್ಷೇತ್ರದರ್ಶನ, ನಾಗಾರ್ಜುನ ಸಾಹಿತ್ಯ, ಬೆಂಗಳೂರು, 2017, ಪು.ಸಂ.28.
3. ಡಾ.ಕೆ.ವಸಂತಲಕ್ಷ್ಮೀ, ಕರ್ನಾಟಕದ ಶೈವ ಶಿಲ್ಪಗಳು, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, 2008. ಪು.ಸಂ.45
4. ಅದೇ, ಪು.ಸಂ.48
5. ಡಾ.ಚಂದ್ರು ಕಾಳೇನಹಳ್ಳಿ, ಸೋಲಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2011, ಪು.ಸಂ.76